## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿ(ಪ್ರತಿ ಅರ್ಹ ಕುಟುಂಬ)ಗಳ ಗರಿಷ್ಠ ಮೊತ್ತವನ್ನು ರೂ.2.50 ಲಕ್ಷಗಳಿಂದ ರೂ.5.00 ಲಕ್ಷಗಳಿಗೆ ಹೆಚ್ಚಿಸಿರುವ ಕುರಿತು.

**ಓದಲಾಗಿದೆ:**
1. 2022-23ನೇ ವಾರ್ಷಿಕ ಪ್ರಧಾನ ಸುತ್ತೋಲೆಯ ಪುಟ ಸಂಖ್ಯೆ: 45 ಪ್ಯಾರಾ 7.4.12 ನಲ್ಲಿನ ಕಂಡಿಕೆ 3ರ ರೀತ್ಯಾ.
2. RDC-EGS/800/2022, ಕಂಡಿಕೆ 15 ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅನುಮೋದಿಸಿದ ರೀತ್ಯಾ.
3. ದಿನಾಂಕ: 25.06.2020 ರಂದು ನಡೆದ ರಾಜ್ಯ ಉದ್ಯೋಗ ಖಾತ್ರಿ ಪರಿಷತ್ತಿನ ನಡವಳಿಗಳು

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬದ ವಯಸ್ಕ ಸದಸ್ಯರುಗಳಿಗೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಕೂಲಿ ಸಹಿತ ಉದ್ಯೋಗವನ್ನು ಒದಗಿಸುವುದು ಹಾಗೂ ಆ ಮೂಲಕ ಗ್ರಾಮೀಣ ಪ್ರದೇಶದ ಕುಟುಂಬಗಳ ಜೀವನೋಪಾಯ ಭದ್ರತೆಯನ್ನು ಉತ್ತೇಜಿಸುವುದು.

**ಪ್ರಮುಖ ಉದ್ದೇಶಗಳು :**

- ಯೋಜನೆಯಡಿ ಅಕುಶಲ ಕೆಲಸ ಮಾಡಲು ಇಚ್ಛಿಸುವ ಪ್ರತಿ ಗ್ರಾಮೀಣ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಕೂಲಿ ಸಹಿತ ಅಕುಶಲ ಕೆಲಸ ನೀಡುವುದು.
- ಗ್ರಾಮೀಣ ಪ್ರದೇಶದಲ್ಲಿ ಬಾಳಿಕೆ ಬರುವ ಆಸ್ತಿಗಳನ್ನು ಸೃಜನೆ ಮಾಡುವುದು.
- ವೈಯಕ್ತಿಕ ಆಸ್ತಿಗಳನ್ನು ಸೃಜನೆ ಮಾಡುವ ಮೂಲಕ ಗ್ರಾಮೀಣ ಜನರ ಜೀವನಾಧಾರ ಚಟುವಟಿಕೆಗಳನ್ನು ಬಲಪಡಿಸುವುದು.

ಈ ಹಿನ್ನೆಲೆಯಲ್ಲಿ ಕೂಲಿಕಾರರಿಗೆ ಅಕುಶಲ ಕೆಲಸ ಒದಗಿಸುವುದರ ಜೊತೆಗೆ ಅರ್ಹ ವೈಯಕ್ತಿಕ ಫಲಾನುಭವಿಗಳಿಗೆ ಜೀವನಾಧಾರಕ್ಕೆ ನೆರವಾಗುವ ವೈಯಕ್ತಿಕ ಆಸ್ತಿಗಳನ್ನು ಸೃಜನೆ ಮಾಡುವ ಮೂಲಕ, ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಮಹಾತ್ಮಗಾಂಧಿ ನರೇಗಾ ಅಧಿನಿಯಮ 2005ರ. ಅನುಸೂಚಿ 1, ಪ್ಯಾರಾ 5ರಲ್ಲಿ ಹಾಗೂ ಮೇಲೆ ಓದಲಾದ (1) ರಲ್ಲಿ ತಿಳಿಸಿದಂತೆ ಯೋಜನೆಯಡಿ ವೈಯಕ್ತಿಕ ಸೌಲಭ್ಯಗಳನ್ನು ಪಡೆಯಲು ಫಲಾನುಭವಿಯು (ಅರ್ಹ ಕುಟುಂಬವು) ಈ ಕೆಳಕಂಡ ವರ್ಗಗಳಲ್ಲಿ ಯಾವುದಾದರೂ ಒಂದು ವರ್ಗದಲ್ಲಿ ಅರ್ಹರಾಗಿರತಕ್ಕದ್ದು.

- ಪರಿಶಿಷ್ಟ ಜಾತಿ
- ಪರಿಶಿಷ್ಟ ಪಂಗಡ
- ಅಲೆಮಾರಿ ಬುಡಕಟ್ಟುಗಳು
- ಅಧಿಸೂಚನೆಯಿಂದ ಕೈಬಿಟ್ಟ ಬುಡಕಟ್ಟುಗಳು
- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು

- ಮಹಿಳಾ ಪ್ರಧಾನ ಕುಟುಂಬಗಳು
- ವಿಕಲಚೇತನ ಕುಟುಂಬಗಳು
- ಭೂ-ಸುಧಾರಣಾ ಫಲಾನುಭವಿಗಳು
- ವಸತಿ ಯೋಜನೆಗಳ ಫಲಾನುಭವಿಗಳು
- ಅರಣ್ಯ ಹಕ್ಕು ಕಾಯ್ದೆ 2006ರ ಫಲಾನುಭವಿಗಳು
- ಸಣ್ಣ ಮತ್ತು ಅತಿ ಸಣ್ಣ ರೈತರು

ಫಲಾನುಭವಿಯು ವೈಯಕ್ತಿಕ ಸೌಲಭ್ಯ ಪಡೆಯಲು ಅಧಿನಿಯಮದ ಅನುಸೂಚಿ 1 ಪ್ಯಾರಾ 5ರಲ್ಲಿ ಈ ಎರಡು ಷರತ್ತುಗಳನ್ನು ವಿಧಿಸಲಾಗಿದೆ.

- ಫಲಾನುಭವಿಯು (ಅರ್ಹ ಕುಟುಂಬವು) ಕಡ್ಡಾಯವಾಗಿ ನರೇಗಾ ಯೋಜನೆಯ ಜಾಬ್ ಕಾರ್ಡ್ ಹೊಂದಿರಬೇಕು.
- ಫಲಾನುಭವಿಗೆ ನೀಡಲಾದ ವೈಯಕ್ತಿಕ ಕಾಮಗಾರಿಯಲ್ಲಿ ಆತನ ಕುಟುಂಬದ ಕನಿಷ್ಠ ಒಬ್ಬ ಸದಸ್ಯರಾದರೂ ಕೆಲಸ ನಿರ್ವಹಿಸಬೇಕು.

ನರೇಗಾ ಯೋಜನೆಯ Annual Master Circular 2022-23ರ ಪ್ಯಾರಾ 7.4.12(III) ರಲ್ಲಿ ಯೋಜನೆಯಡಿ ಪ್ರತಿ ಫಲಾನುಭವಿಗೆ (ಪ್ರತಿ ಅರ್ಹ ಕುಟುಂಬಕ್ಕೆ) ನೀಡಬಹುದಾದ ವೈಯಕ್ತಿಕ ಕಾಮಗಾರಿಗಳ ಗರಿಷ್ಠ ಮೊತ್ತದ ಮಿತಿಯನ್ನು ರೂ.2.00 ಲಕ್ಷಗಳಿಗೆ ನಿಗದಿಪಡಿಸಿ, ಸದರಿ ಗರಿಷ್ಠ ಮೊತ್ತದ ಮಿತಿಯನ್ನು ಹೆಚ್ಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿರುತ್ತದೆ.

ಅದರಂತೆ, ಮೇಲೆ ಓದಲಾದ (3) ರಲ್ಲಿ ದಿನಾಂಕ: 25-06-2020 ರಂದು ನಡೆದ ರಾಜ್ಯ ಉದ್ಯೋಗ ಖಾತ್ರಿ ಪರಿಷತ್ ಸಭೆಯಲ್ಲಿ ನರೇಗಾ ಯೋಜನೆಯಡಿ ಪ್ರತಿ ಕುಟುಂಬಕ್ಕೆ ನೀಡಲಾಗುವ ವೈಯಕ್ತಿಕ ಸೌಲಭ್ಯದ ಆರ್ಥಿಕ ಮಿತಿಯನ್ನು ಪ್ರತಿ ಫಲಾನುಭವಿಗೆ ಜೀವಿತಾವಧಿಗೆ ರೂ.2.50 ಲಕ್ಷಗಳಿಗೆ ನಿಗದಿಪಡಿಸಲಾಗಿತ್ತು.

ರೈತರಿಗೆ ಕೃಷಿಹೊಂಡ, ಕಂದಕ ಬದು ನಿರ್ಮಾಣ, ಜಾನುವಾರು ಶೆಡ್, ತೋಟಗಾರಿಕೆ/ರೇಷ್ಮೆ ಬೆಳೆಗಳು, ಅರಣ್ಯ ಕೃಷಿ, ಸೋಕ್ ಪಿಟ್ ಸೇರಿದಂತೆ ಹಲವು ವೈಯಕ್ತಿಕ ಕಾಮಗಾರಿಗಳನ್ನು ಒದಗಿಸುವುದರಿಂದ ಅವರನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ರಾಜ್ಯಕ್ಕೆ ಪ್ರಸಕ್ತ ಸಾಲಿನಲ್ಲಿ ನರೇಗಾ ಯೋಜನೆಯಡಿ ನಿಗದಿಪಡಿಸಲಾದ ಕೂಲಿ ದರಕ್ಕೆ ಅನುಗುಣವಾಗಿ ಯೋಜನೆಯಡಿ ನೀಡಲಾಗುವ ವೈಯಕ್ತಿಕ ಕಾಮಗಾರಿಗಳ ಅಂದಾಜು ವೆಚ್ಚಗಳನ್ನು ಪರಿಷ್ಕರಿಸಲಾಗಿದೆ. ಇದರಿಂದ ರೂ. 2.50 ಲಕ್ಷಗಳ ಮಿತಿಯಲ್ಲಿ ಒಂದು ಕುಟುಂಬಕ್ಕೆ ಅಗತ್ಯವಿರುವ ಎಲ್ಲಾ ವೈಯಕ್ತಿಕ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರತಿ ಅರ್ಹ ಕುಟುಂಬಕ್ಕೆ ನೀಡಲಾಗುವ ವೈಯಕ್ತಿಕ ಸೌಲಭ್ಯದ ಮಿತಿಯನ್ನು ರೂ.5.00 ಲಕ್ಷಗಳಿಗೆ ಹೆಚ್ಚಿಸುವುದು ಸೂಕ್ತವಾಗಿರುತ್ತದೆ.

ಮೇಲೆ ಓದಲಾದ (2) ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರೈತರಿಗೆ ಸುಸ್ಥಿರ ಜೀವನೋಪಾಯ ಕಲ್ಪಿಸಿಕೊಡಲು, ನರೇಗಾ ಯೋಜನೆಯ 2005ರ ಅನುಸೂಚಿ 1, ಪ್ಯಾರಾ 5ರಲ್ಲಿ ವೈಯಕ್ತಿಕ ಸೌಲಭ್ಯ ಪಡೆಯಲು ಅರ್ಹರಾದ ಫಲಾನುಭವಿಗಳಿಗೆ ಜೀವಿತಾವಧಿಗೆ ನೀಡಲಾಗುವ ವೈಯಕ್ತಿಕ ಸೌಲಭ್ಯಗಳ ಆರ್ಥಿಕ

ಮಿತಿಯನ್ನು ರೂ. 5.00 ಲಕ್ಷಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: RDC-EGS/800/2022 ಬೆಂಗಳೂರು ದಿನಾಂಕ: 01-12-2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳಂತೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯ 2005ರ ಅನುಸೂಚಿ 1, ಪ್ಯಾರಾ 5ರಲ್ಲಿ ವೈಯಕ್ತಿಕ ಸೌಲಭ್ಯ ಪಡೆಯಲು ಅರ್ಹರಾದ ಪ್ರತಿ ಫಲಾನುಭವಿಗೆ(ಪ್ರತಿ ಅರ್ಹ ಕುಟುಂಬಕ್ಕೆ) ನೀಡಬಹುದಾದ ವೈಯಕ್ತಿಕ ಕಾಮಗಾರಿಗಳ ಗರಿಷ್ಠ ಮೊತ್ತದ ಮಿತಿಯನ್ನು ರೂ. 5.00 ಲಕ್ಷಗಳಿಗೆ ಹೆಚ್ಚಿಸಿ ಆದೇಶಿಸಿದೆ.

ಅದರಂತೆ ರೈತರಿಗೆ ಸುಸ್ಥಿರ ಜೀವನೋಪಾಯ ಕಲ್ಪಿಸಿ, ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು **"ಯೋಜನೆಯಡಿ ನೊಂದಾಯಿತವಾದ ಒಂದು ಅರ್ಹ ಕುಟುಂಬವು ತನ್ನ ಜೀವಿತಾವಧಿಯಲ್ಲಿ ಗರಿಷ್ಠ 5.00 ಲಕ್ಷಗಳವರೆಗೆ ಯೋಜನೆಯಡಿ ನೀಡಲಾಗುವ ವೈಯಕ್ತಿಕ ಕಾಮಗಾರಿಗಳನ್ನು ಪಡೆದುಕೊಳ್ಳಬಹುದಾಗಿದೆ".**

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತೆಗೆದುಕೊಳ್ಳಬಹುದಾದ ವೈಯಕ್ತಿಕ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

Chetna 13/12/23

( ಚೇತನ ಎಂ )
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ & ಸ್ಕೀಮರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲಕರು, ಬೆಂಗಳೂರು.
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳಿಗೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳು.
7. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳು.
8. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು(ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು) ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

9. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳಿಗೆ.
10. ಆಯುಕ್ತರು ಪಂ.ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯರ್ಶಿಗಳು.
11. ನಿರ್ದೇಶಕರು ಎ.ಎನ್.ಎಸ್.ಎಸ್.ಐ.ಆರ್.ಡಿ, ಇವರ ಆಪ್ತ ಕಾರ್ಯದರ್ಶಿಗಳು, ಮೈಸೂರು.
12. ನಿರ್ದೇಶಕರು, ಸಾಮಾಜಿಕ ಪರಿಶೋಧನೆ, ಸಾಮಾಜಿಕ ಪರಿಶೋಧನೆ ನಿರ್ದೇಶನಾಲಯ, ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
13. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
14. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ&ಪಂ.ರಾಜ್ ಇಲಾಖೆ.
15. ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಜಂಟಿ ನಿರ್ದೇಶಕರು (ಆಡಳಿತ)/ತಾಂತ್ರಿಕ)/ತೋಟಗಾರಿಕೆ), ಗ್ರಾಅ&ಪಂ.ರಾಜ್ ಇಲಾಖೆ.
16. ಎಲ್ಲಾ ಮಹಾತ್ಮ ಗಾಂಧಿ ನರೇಗಾ ಯೋಜನೆ ಅನುಷ್ಠಾನ ಇಲಾಖೆಯ ಅಧಿಕಾರಿಗಳು
17. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

# ಪರಿಷ್ಕೃತ ಅನುಬಂಧ

| ಕ್ರ ಸಂ | ಕಾಮಗಾರಿ ಹೆಸರು | ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|
| 1 | ದನದ ಕೊಟ್ಟಿಗೆ – 4 ದನಗಳಿಗೆ | 0.57 |
| 2 | ಕುರಿ/ಮೇಕೆ ಕೊಟ್ಟಿಗೆ | 0.7 |
| 3 | ಬಚ್ಚಲು ಗುಂಡಿ | 0.11 |
| 4 | ಕೋಳಿ ಶೆಡ್ | 0.6 |
| 5 | ಕೊಳವೆ ಬಾವಿ ಮರುಪೂರಕ ಘಟಕ | 0.45 |
| 6 | ಎರೆಹುಳ ಘಟಕ | 0.2 |
| 7 | ತೆರೆದ ಬಾವಿ | 1.5 |
| 8 | ಅಜೋಲಾ ಘಟಕ | 0.16 |
| 9 | ಕೃಷಿ ಹೊಂಡ 9.0x9.0x3.0 ಮೀ | 0.52 |
| 10 | ಕೃಷಿ ಹೊಂಡ 10.0x10.0x3.0 ಮೀ | 0.63 |
| 11 | ಕೃಷಿ ಹೊಂಡ 12.0x12.0x3.0 ಮೀ | 0.92 |
| 12 | ಕೃಷಿ ಹೊಂಡ 15.0x15.0x3.0 ಮೀ | 1.49 |
| 13 | ಕಂದಕ ಬದು ನಿರ್ಮಾಣ – 0.45 ಚ. ಮೀ | 0.35 |
| 14 | ಕಂದಕ ಬದು ನಿರ್ಮಾಣ – 0.54 ಚ. ಮೀ | 0.42 |
| 15 | ಕಂದಕ ಬದು ನಿರ್ಮಾಣ – 0.72 ಚ. ಮೀ | 0.56 |
| 16 | ಕಂದಕ ಬದು ನಿರ್ಮಾಣ – 1.07 ಚ. ಮೀ | 0.84 |
| 17 | ಹಂದಿ ಕೊಟ್ಟಿಗೆ | 0.87 (0.57) |
| 18 | ರೈತರ ಹೊಲದಲ್ಲಿ ಇಂಗು ಗುಂಡಿ ನಿರ್ಮಾಣ | 0.04 |
| 19 | ದೀನಬಂಧು ಜೈವಿಕ ಅನಿಲ (ನರೇಗಾ-ರೂ.20,000/-) | 0.4 |
| 20 | ಕೆವಿಐಸಿ ಜೈವಿಕ ಅನಿಲ (ನರೇಗಾ-ರೂ.20,000/-) | 0.4 |
| 21 | ಅಡಿಕೆ (1 ಹೆ) | 1.68 |
| 22 | ತೆಂಗು (1 ಹೆ) | 0.66 |
| 23 | ಗೇರು (1 ಹೆ) | 0.63 |
| 24 | ಮಾವು/ಸಪೋಟ (1 ಹೆ) | 0.56 |
| 25 | ಮಾವು/ಸಪೋಟ (HIGH DENSITY) (1 ಹೆ) | 1.41 |
| 26 | ದಾಳಿಂಬೆ (1 ಹೆ) | 0.69 |

Sutra

| | | |
|---|---|---|
| 27 | ಸೀಬೆ (1 ಹೆ) | 1.31 |
| 28 | ಸೀಬೆ (HIGH DENSITY) (1 ಹೆ) | 1.87 |
| 29 | ತಾಳೆ (1 ಹೆ) | 0.34 |
| 30 | ಚಕ್ಕೆ ದಾಲ್ಚಿನ್ನಿ (1 ಹೆ) | 1.74 |
| 31 | ಲವಂಗ (1 ಹೆ) | 0.5 |
| 32 | ಗುಲಾಬಿ(1.5x1.8) (0.40 ಹೆ) | 0.79 |
| 33 | ಗುಲಾಬಿ(1x2) (0.40 ಹೆ) | 1.06 |
| 34 | ಮಲ್ಲಿಗೆ (0.02 ಹೆ) | 0.05 |
| 35 | ಮಲ್ಲಿಗೆ (0.04 ಹೆ) | 0.08 |
| 36 | ಮಲ್ಲಿಗೆ (0.10 ಹೆ) | 0.24 |
| 37 | ಮಲ್ಲಿಗೆ (0.20 ಹೆ) | 0.49 |
| 38 | ಮಲ್ಲಿಗೆ (0.40 ಹೆ) | 0.96 |
| 39 | ಬಾಳೆ (ಅಂಗಾಂಶ) (1 ಹೆ) | 2.05 |
| 40 | ಪಪಾಯಿ (1 ಹೆ) (2.40*2.40) | 1.18 |
| 41 | ಪಪಾಯಿ (1 ಹೆ) (1.8*1.8) | 2.05 |
| 42 | ಕಾಳುಮೆಣಸು(ಅಡಿಕೆ ತೋಟದ ಅಂತರಬೆಳೆ) (1 ಹೆ) | 1.09 |
| 43 | ಕಾಳುಮೆಣಸು (ತೆಂಗಿನ ತೋಟದಲ್ಲಿ ಅಂತರಬೆಳೆ) (1 ಹೆ) | 0.19 |
| 44 | ಕಾಳುಮೆಣಸು (ಕಾಫಿ ತೋಟದಲ್ಲಿ ಅಂತರಬೆಳೆ) (1 ಹೆ) | 0.45 |
| 45 | ಸಿಟ್ರಸ್(ನಿಂಬೆ,ಮೋಸಂಬಿ, ಕಿತ್ತಳೆ, ಇತ್ಯಾದಿ) (1 ಹೆ) | 0.49 |
| 46 | ಹುಣಸೆ (1 ಹೆ) | 1.18 |
| 47 | ನೇರಳೆ (1 ಹೆ) | 0.54 |
| 48 | ಸೀತಾಫಲ (1 ಹೆ) | 0.58 |
| 49 | ಬಾರೆ (1 ಹೆ) | 0.48 |
| 50 | ನುಗ್ಗೆ (1 ಹೆ) | 0.7 |
| 51 | ನೆಲ್ಲಿ (1 ಹೆ) | 1.69 |
| 52 | ಅಂಜೂರ (1 ಹೆ) | 0.88 |
| 53 | ಕೋಕೋ (1 ಹೆ) | 0.56 |
| 54 | ಹಲಸು (1 ಹೆ) | 0.54 |
| 55 | ದ್ರಾಕ್ಷಿ (1.8*1.8) (1 ಹೆ) | 4.72 |
| 56 | ದ್ರಾಕ್ಷಿ (2.4 *1.8) (1 ಹೆ) | 3.53 |
| 57 | ದ್ರಾಕ್ಷಿ (6.7 * 3.35) (1 ಹೆ) | 0.7 |
| 58 | ದ್ರಾಕ್ಷಿ (3.35 * 3.35) 1 ಎಕರೆ | 0.8 |
| 59 | ದ್ರಾಕ್ಷಿ (3.5 *1.5) (1 ಹೆ) | 2.79 |
| 60 | ವೀಳೆದೆಲೆ ಅರ್ಧಎಕರೆ | 0.28 |

Sd/-

| | | |
|---|---|---|
| 61 | ಕರೀಬೇವು ಅರ್ಧ ಎಕರೆ | 0.6 |
| 62 | ಕಾಫಿ(1.8*1.8)Tall arabica var. (1 ಹೆ) | 1.68 |
| 63 | ಕಾಫಿ(1.5*1.5)Dwarf arabica var. (1 ಹೆ) | 2.36 |
| 64 | ಕಾಫಿ(2.4*2.4)Robusta var.CxR (1 ಹೆ) | 1 |
| 65 | ಕಾಫಿ(3*3)Robusta var. (1 ಹೆ) | 0.73 |
| 66 | ಕಾಫಿ(3.6*3.6) Old Robusta. (1 ಹೆ) | 0.54 |
| 67 | ಕಾಫಿ(2.7*2.7) Robusta var CxR, Arabica. (1 ಹೆ) | 0.82 |
| 68 | ಬೆಣ್ಣೆಹಣ್ಣು (Avacado) (6x6 ಮೀ) 1acre | 0.51 |
| 69 | ಬೆಣ್ಣೆಹಣ್ಣು (Avacado) (8x8 ಮೀ)1acre | 0.3 |
| 70 | ಬೆಣ್ಣೆಹಣ್ಣು (Avacado) (10x10 ಮೀ)1acre | 0.2 |
| 71 | ರಾಮ್ಭೂತಾನ್ (Rambutan) (6x6)1acre | 0.52 |
| 72 | ರಾಮ್ಭೂತಾನ್ (Rambutan) (8x6)1acre | 0.39 |
| 73 | ರಾಮ್ಭೂತಾನ್ (Rambutan) (8x8)1acre | 0.3 |
| 74 | ಕಾಳು ಮೆಣಸು (ರೋಬಸ್ಟಾ ಕಾಫಿ ತೋಟದಲ್ಲಿ ಸಲ್ವರ್ ಓಕ್ ಹಾಗೂ ಇತರೆ ಕಾಡು ಜಾತಿಯ ಮರಗಳಿಗೆ) (4*4) | 0.31 |
| 75 | ಕಾಳು ಮೆಣಸು (ಆರೇಬಿಕಾ ಕಾಫಿ ತೋಟದಲ್ಲಿ ಸಲ್ವರ್ ಓಕ್ ಹಾಗೂ ಇತರೆ ಕಾಡು ಜಾತಿಯ ಮರಗಳಿಗೆ) (3*3) | 0.54 |
| 76 | ಅಪ್ಪೇಮಿಡಿ ಮಾವು ಬೆಳೆ (HD) | 0.94 |
| 77 | ಅಪ್ಪೇಮಿಡಿ ಮಾವು ಬೆಳೆ (Border Planting) 1 km | 0.37 |
| 78 | ಬದುಗಳ ಅಂಚಿನಲ್ಲಿ ತೆಂಗಿನ ಸಸಿಗಳ ಅಭಿವೃದ್ಧಿ | 0.24 |
| 79 | ತೆಂಗು ಪುನಃಶ್ಚೇತನ (ಬುಡಸಮೇತತೆಗೆದು) ಎತ್ತರತಳಿ (1 ಹೆ) | 0.62 |
| 80 | ತೆಂಗು ಪುನಃಶ್ಚೇತನ (ಬುಡಸಮೇತತೆಗೆದು) ಗಿಡ್ಡತಳಿ (1 ಹೆ) | 0.62 |
| 81 | ತೆಂಗು ಪುನಃಶ್ಚೇತನ (ಬುಡಸಮೇತತೆಗೆದು) ಹೈಬ್ರೀಡ್ (1 ಹೆ) | 0.65 |
| 82 | ಮಾವು/ಸಪೋಟ ಪುನಃಶ್ಚೇತನ (ಕಸಿಕಟ್ಟಿ) (1 ಹೆ) | 0.49 |
| 83 | ಮಾವು/ಸಪೋಟ ಪುನಃಶ್ಚೇತನ (ಮರುನಾಟಿ) (1 ಹೆ) | 0.47 |
| 84 | ಗೋಡಂಬಿ ಪುನಃಶ್ಚೇತನ (1 ಹೆ) | 0.61 |
| 85 | ಅಡಿಕೆ ಪುನಃಶ್ಚೇತನ (25% ಮರುನಾಟಿ) (1 ಹೆ) | 0.6 |
| 86 | ಅಡಿಕೆ ಪುನಃಶ್ಚೇತನ (50% ಮರುನಾಟಿ) (1 ಹೆ) | 1.06 |
| 87 | ನಿಂಬೆ ಪುನಃಶ್ಚೇತನ (1 ಹೆ) | 0.31 |
| 88 | ತಾಳೆಬೆಳೆ ಪುನಃಶ್ಚೇತನ (1 ಹೆ) | 0.4 |
| 89 | ತಾಳೆ ಬೆಳೆಯ ಉತ್ಪಾದಕತೆ ಹೆಚ್ಚಿಸಲು (1 ಹೆ) | 0.26 |
| 90 | ಡ್ರಾಗನ್ ಫ್ರೂಟ್ | 1.54 |
| 91 | ವೀಳೆದೆಲೆ (1.5*1.5) ಅರ್ಧ ಎಕರೆ | 0.58 |
| 92 | ಜಾಯಿ ಕಾಯಿ (ಕಸಿ ಸಸಿಗಳು) (5*5) | 0.36 |

| | | |
|---|---|---|
| 93 | ಜಾಯಿ ಕಾಯಿ (ಬೀಜದ ಸಸಿಗಳು) (8*8) | 0.25 |
| 94 | ಸರ್ವ ಸಂಬಾರ (ಆಲ್ ಸ್ಪೈಸ್) | 0.41 |
| 95 | ವ್ಯಕ್ತಿಗತ ಫಲಾನುಭವಿಯ ಆವರಣದಲ್ಲಿ ಪೋಷಕಾಂಶ ತೋಟ ಅಭಿವೃದ್ಧಿ | 0.05 |
| 96 | ವ್ಯಕ್ತಿಗತ ಫಲಾನುಭವಿಯ ಆವರಣದಲ್ಲಿ ಪೋಷಕಾಂಶ ತೋಟ ಅಭಿವೃದ್ಧಿ (ಗೊಬ್ಬರದ ಗುಂಡಿ) | 0.05 |
| 97 | ಒಂದು ಎಕರೆ ಪ್ರದೇಶದಲ್ಲಿ ಹಿಪ್ಪು ನೇರಳೆ ನರ್ಸರಿ ಅಭಿವೃದ್ಧಿ | 1.28 |
| 98 | ಒಂದು ಎಕರೆ ಪ್ರದೇಶದಲ್ಲಿ ಹೊಸ ಹಿಪ್ಪು ನೇರಳೆ ತೋಟ ಅಭಿವೃದ್ಧಿ | 1.01 |
| 99 | ಒಂದು ಎಕರೆ ಪ್ರದೇಶದಲ್ಲಿ ಮರ ಪದ್ಧತಿಯಲ್ಲಿ ಹೊಸ ಹಿಪ್ಪು ನೇರಳೆ ತೋಟ ಅಭಿವೃದ್ಧಿ | 0.54 |

Sratna